

## ‘ಕಾಂತಾರ’ ನಂಟು

‘ಕಾಂತಾರ’ ಸಿನಿಮಾ ಬಿಡುಗಡೆಯಾಗಿ ಮೂರು ವರ್ಷಗಳು ಕಳೆದರೂ ಜನರು ತಮ್ಮನ್ನು ಆ ಸಿನಿಮಾದಿಂದ ಈಗಲೂ ಗುರುತಿಸುತ್ತಿದ್ದಾರೆ ಎಂದು ಖುಷಿಯಿಂದ ಹೇಳಿಕೊಂಡಿದ್ದಾರೆ ನಟಿ ಸಪ್ತಮಿ ಗೌಡ.

ಈಚೆಗೆ ಮಂಗಳೂರಿನಲ್ಲಿ ಕಂಬಳ ಹಾಗೂ ಭೂತಕೋಲದ ಕಾರ್ಯಕ್ರಮಕ್ಕೆ ಭೇಟಿ ನೀಡಿದ್ದ ಅವರು, ‘ಕಾಂತಾರ’ ಸಿನಿಮಾ ಹಾಗೂ ಆ ಸಿನಿಮಾದೊಂದಿಗಿನ ತಮ್ಮ ನಂಟಿನ ಬಗ್ಗೆ ಮಾತನಾಡಿದ್ದಾರೆ.

“ಸಿನಿಮಾ ಬಿಡುಗಡೆಯಾಗಿ ಮೂರು ವರ್ಷಗಳು ಕಳೆದಿವೆ. ಈಗಲೂ ನನ್ನ ಹೆಸರು ಕೇಳುತ್ತಿದ್ದಂತೆ ‘ಕಾಂತಾರ’ ಹೆಸರು ಜನರ ಬಾಯಲ್ಲಿ ಬರುತ್ತದೆ. ಕೆಲವರು ನನ್ನ ಬಳಿ ತುಳು ಭಾಷೆಯಲ್ಲಿ ಮಾತನಾಡುತ್ತಾರೆ. ನಾನೂ ಕರಾವಳಿಯವಳೇ ಎಂದು ಭಾವಿಸಿದ್ದಾರೆ” ಎಂದಿದ್ದಾರೆ.

ಈ ಸಿನಿಮಾ ತಮಗೆ ಗುರುತು ಕೊಟ್ಟಿದ್ದು ಮಾತ್ರವಲ್ಲ, ಕರಾವಳಿಯ ಶ್ರೀಮಂತ ಪ್ರಕೃತಿಯನ್ನು ಪರಿಚಯಿಸಿರುವುದಾಗಿಯೂ ಹೇಳಿಕೊಂಡಿದ್ದಾರೆ.

‘ನನಗೆ ಸಿನಿಮಾ ಚಿತ್ರೀಕರಣ ಸಮಯದಲ್ಲಿ ಕಂಬಳವನ್ನು ನೋಡಲು ಆಗಿರಲಿಲ್ಲ. ಈಗ ನಿಜ ಜೀವನದಲ್ಲಿ ಕಂಬಳ, ಕೋಲ ನೋಡುತ್ತಿದ್ದೇನೆ. ಇದು ಕೇವಲ ಕಾರ್ಯಕ್ರಮವಲ್ಲ, ಆತ್ಮವನ್ನು ಉದ್ದೀಪನಗೊಳಿಸುವ ಭಾವನೆ. ಜನ ಏಕೆ ಸಂಪ್ರದಾಯಗಳಿಗೆ ಅಷ್ಟು ಪ್ರಾಮುಖ್ಯ ಕೊಡುತ್ತಾರೆ ಎಂಬುದು ನನಗೆ ಅರ್ಥವಾಗುತ್ತಿದೆ’ ಎಂದು ಹೇಳಿದ್ದಾರೆ.

‘ನನಗೂ ಕರಾವಳಿ ಇಷ್ಟವಾಗಿದೆ. ಈ ಭಾಷೆ, ಪರಿಸರ, ಜನ ಎಲ್ಲ ಸಂಗತಿಗಳು ಮನಸ್ಸಿಗೆ ಹತ್ತಿರವಾಗಿವೆ. ನನ್ನ ಎರಡನೇ ಮನೆ ಎನಿಸುತ್ತಿದೆ’ ಎಂದು ಹೇಳಿದ್ದಾರೆ. ■

# ಬರ್ಲಿನ್ ಚಿತ್ರೋತ್ಸವದಲ್ಲಿ ಕನ್ನಡದ ‘ವಾಘಚಿಪಾಣಿ’

**ನಟೇಶ್ ಹೆಗಡೆ** ನಿರ್ದೇಶನದ, ಅನುರಾಗ್ ಕಶ್ಯಪ್ ನಿರ್ಮಾಣ ಮಾಡಿರುವ ಕನ್ನಡದ ‘ವಾಘಚಿಪಾಣಿ’ ಚಿತ್ರ 75ನೇ ಬರ್ಲಿನ್ ಅಂತರರಾಷ್ಟ್ರೀಯ ಚಿತ್ರೋತ್ಸವಕ್ಕೆ ಆಯ್ಕೆಗೊಂಡಿದ್ದು, ಫೆ.13ರಿಂದ 23ರವರೆಗೆ ನಡೆಯಲಿರುವ ಚಿತ್ರೋತ್ಸವದಲ್ಲಿ ‘ಬರ್ಲಿನ್ ಫೋರಂ’ ವಿಭಾಗದಲ್ಲಿ ಈ ಚಿತ್ರದ ವರ್ಲ್ಡ್ ಪ್ರೀಮಿಯರ್ ಆಗಲಿದೆ.




ಬರ್ಲಿನ್ ಫೋರಂ ಸ್ಪರ್ಧಾ ವಿಭಾಗವಾಗಿದ್ದು, 30 ಚಿತ್ರಗಳು ಸ್ಪರ್ಧೆಯಲ್ಲಿವೆ. ಬರ್ಲಿನ್ ಚಿತ್ರೋತ್ಸವಕ್ಕೆ ಆಯ್ಕೆಗೊಂಡ ಮೊದಲ ಕನ್ನಡದ ಚಿತ್ರ ಎಂಬ ಹೆಗ್ಗಳಿಕೆಯೂ ‘ವಾಘಚಿಪಾಣಿ’ಗೆ ಜೊತೆಯಾಗಿದೆ.

ನಟೇಶ್ ಹೆಗಡೆ ಅವರ ಎರಡನೇ ಚಿತ್ರ ಇದಾಗಿದ್ದು, ವಿಶಿಷ್ಟ ಕಥಾಹಂದರ ಹೊಂದಿರುವ ಇವರ ಮೊದಲ ಚಿತ್ರ ‘ಪೆದ್ರೊ’ ಕೂಡ ಬೂಸಾನ್ ಸೇರಿದಂತೆ ಅನೇಕ ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರಶಸ್ತಿ ಗಳಿಸಿತ್ತು.

ಅಮರೇಶ ನುಗಡೋಣಿ ಅವರ ದಲಿತ ಮಹಿಳೆ ಕುರಿತಾದ ಕಥೆಯನ್ನು ಹೊಂದಿರುವ ಚಿತ್ರ ಇದಾಗಿದ್ದು, ಶಿರಸಿ ಸುತ್ತಮುತ್ತ ಚಿತ್ರೀಕರಣಗೊಂಡಿದೆ. ಅಚ್ಯುತ್ ಕುಮಾರ್, ನಟೇಶ್, ಗೋಪಾಲ್ ಹೆಗಡೆ ಮೊದಲಾದವರು ಚಿತ್ರದಲ್ಲಿ ಅಭಿನಯಿಸಿದ್ದಾರೆ. ಮಲೆಯಾಳಂ ನಟ, ನಿರ್ದೇಶಕ ದಿಲೀಶ್ ಪೋತನ್ ಪ್ರಮುಖ ಪಾತ್ರದಲ್ಲಿರುವುದಾಗಿ ತಿಳಿದುಬಂದಿದೆ. ■